ಶ್ರೀ ಕೆ. ಹೆಚ್. ರಂಗನಾಥ್.—ಇಪತ್ತಿನ ದಿವಸ ಬೇಳೆ ಕೆ. ಜಿ. ಗೆ ರೂ. ೦೭ ಆಗಿದೆ, ಎಣ್ಣೆ ಕೆ. ಜಿ. ಗೆ ರೂ. ೪೦ ಆಗಿದೆ, ಸೌದೆ ಸಿಗುತ್ತಿಲ್ಲ. ಗ್ಯಾಸ್ ಸರಿಯಾಗಿ ಸಪ್ಲೈ ಆಗುತ್ತಿಲ್ಲ. ಇದು ನಿಮಗೆ ಗೊತ್ತಿದೆ. ಹಾಸ್ಟೆಲ್‌ಗಳು ಬಹಳ ಕಟ್ಟು ಸ್ಥಿತಿಯಲ್ಲಿವೆ. ಊಟದ ವ್ಯವಸ್ಥೆ ಚೆನ್ನಾಗಿಲ್ಲ. ವಿದ್ಯಾರ್ಥಿ ವೇತನವನ್ನು ರೂ. ೨೦೦ ಕ್ಕೆ ಹೆಚ್ಚಿಸಿ ಮಾಡಿರಬಹುದು. ಆದರೆ ಇವತ್ತು ಒಂದು ರೂಪಾಯಿಯ ಬೆಲೆ ಎಷ್ಟು ಉಳಿದಿದೆ ಎಂಬ ಬಗ್ಗೆ ಪುನರ್ ಪರಿಶೀಲನೆ ಮಾಡುವುದು ಒಳ್ಳೆಯದು ಹಾಗೂ ವಿದ್ಯಾರ್ಥಿ ವೇತನವನ್ನು ಹೆಚ್ಚು ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಂ. ಪಿ. ವೆಂಕಟೇಶ್—ಇದನ್ನು ಹೆಚ್ಚಿಸುವ ಬಗ್ಗೆ ಪರಿಶೀಲನೆ ಮಾಡುತ್ತೇವೆಂದು ಕಳೆದ ಸಲ ಹೇಳಿದ್ದರು. ಅದನ್ನೇ ಈಗಲೂ ಹೇಳುತ್ತಿದ್ದಾರೆ, ಪರಿಶಿಷ್ಟ ಜಾತಿಗೆ ಸೇರಿದ ವಿದ್ಯಾರ್ಥಿಗಳಿಗೆ ಈ ವಿದ್ಯಾರ್ಥಿ ವೇತನವನ್ನು ರೂ. ೫೦೦ ಕ್ಕೆ ಹೆಚ್ಚು ಮಾಡಿದರೆ ಒಳ್ಳೆಯದು.

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್.—ಹೈಸ್ಕೂಲ್ ಇರುವ ಕಡೆಯಲ್ಲಿಯೇ ಹಾಸ್ಟೆಲ್ ಕಟ್ಟಬೇಕು. ಇದರ ಬಗ್ಗೆ ನಿರ್ದಿಷ್ಟವಾದ ಒಂದು ಕಾರ್ಯಕ್ರಮವನ್ನು ಸರ್ಕಾರ ಹಾಕಿಕೊಳ್ಳಬೇಕು. ಇಲ್ಲದಿದ್ದರೆ ಮಕ್ಕಳಿಗೆ ಬಹಳ ತೊಂದರೆಯಾಗುತ್ತದೆ. ೩೪೦ ಹಾಸ್ಟೆಲ್‌ಗಳನ್ನು ಕಟ್ಟುತ್ತೇವೆಂದು ಪ್ರಸ್ತಾವನೆ ಮಾಡಿದ್ದಾರಲ್ಲ. ಇದರ ಬಗ್ಗೆ ಎನ್ನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ ? ಪರಿಶೀಲನೆ ಮಾಡುವುದು ಬೇಡ. ಮುಂದೆ ಆಗತಕ್ಕ ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ಇದರ ಬಗ್ಗೆ ನಿರ್ಣಯ ಮಾಡಬೇಕು ಹಾಗೂ ಇದನ್ನು ರೂ. ೩೦೦ ರಿಂದ ರೂ. ೪೦೦ ಕ್ಕೆ ಹೆಚ್ಚು ಮಾಡುವ ಬಗ್ಗೆ ನಿರ್ಣಯ ಮಾಡಬೇಕಾಗಿದೆ.

ಶ್ರೀ ಬಿ. ಶಿವಣ್ಣ.—ಈ ವರ್ಷ ೫೦ ಹಾಸ್ಟೆಲ್‌ಗಳನ್ನು ಮಂಜೂರು ಮಾಡಿದ್ದೇವೆ. ೬೮೫ ಹಾಸ್ಟೆಲ್‌ಗಳಲ್ಲಿ ೩೧೦ ಸರ್ಕಾರಿ ಕಟ್ಟಡದಲ್ಲಿವೆ ಇನ್ನುಳಿದವು ರೆಂಟ್‌ನಲ್ಲಿವೆ. ೧೦೦ ಹಾಸ್ಟೆಲ್‌ಗಳು ಕನ್‌ಸ್ಟ್ರಕ್ಷನ್ ಸ್ಟೇಜ್‌ನಲ್ಲಿವೆ.

ನಿರುದ್ಯೋಗಿಗಳಿಗೆ ಭತ್ಯೆ ಕೊಡುವ ಬಗ್ಗೆ

೨೮೨ ಶ್ರೀ ಪಿ. ಬಸವರಾಜ್ (ಬ್ರಹ್ಮಾವರ).—ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ತಿಳಿಸುವರೆ ?

ಅ) ರಾಜ್ಯದಲ್ಲಿ ಉದ್ಯೋಗ ವಿನಿಮಯ ಕೇಂದ್ರದಲ್ಲಿ ನೊಂದಾಯಿತ ನಿರುದ್ಯೋಗಿಗಳ ಸಂಖ್ಯೆ ಎಷ್ಟು ? (ಜಿಲ್ಲಾವಾರು ವಿವರ ಮತ್ತು ಪ್ರತಿ ಜಿಲ್ಲೆಯಲ್ಲಿ ಪುರುಷರ ಮತ್ತು ಸ್ತ್ರೀಯರ ನಿರುದ್ಯೋಗಿಗಳ ಸಂಖ್ಯೆ ಬೇರೆ ಬೇರೆಯಾಗಿ ತಿಳಿಸುವುದು)

ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸುವಲ್ಲಿ ಸರ್ಕಾರ ವಿಶೇಷ ಯೋಜನೆಗಳನ್ನು ರೂಪಿಸಿದೆಯೇ ? ರೂಪಿಸಿದ್ದರೆ ವಿವರಗಳೇನು ?

ಇ) ನಿರುದ್ಯೋಗಿಗಳಿಗೆ ನಿರುದ್ಯೋಗಿ ಭತ್ಯೆ ನೀಡುವ ಆಲೋಚನೆ ಸರ್ಕಾರದ ಗಮನದಲ್ಲಿದೆಯೇ?

ಶ್ರೀ ಸಿ. ಎಸ್: ನಾಡಗೌಡ (ಕಾರ್ಮಿಕ ಸಚಿವರು).—

ಅ) ರಾಜ್ಯದಲ್ಲಿ ಉದ್ಯೋಗ ವಿನಿಮಯ ಕೇಂದ್ರದಲ್ಲಿ ನೊಂದಾಯಿತ ನಿರುದ್ಯೋಗಿಗಳ ಸಂಖ್ಯೆ ೧೨,೫೬,೯೧೫ ಜಿಲ್ಲಾವಾರು ವಿವರ ಈ ಕೆಳಕಂಡಂತಿದೆ.

ಆ) ಇಲ್ಲ.

ಇ) ಇಲ್ಲ.

ANNEXURE –I

Statement showing the District-wise information regarding the number of applicants on the rolls of Employment Exchanges in the State at the end of 30th September, 1990.

Sl. No	District		Men	Women	Total
1	2		3	4	5
(1)	Bangalore	...	3·25,909	88,104	4,14,013
(2)	Belgaum	...	69,231	9,326	78,557
(3)	Bellary	...	31,847	5,118	36,965
(4)	Bidar	...	25,548	2,332	27,880
(5)	Bijapur	...	46,474	4,868	51,342
(6)	Chikkamagalore	...	20,551	6,441	26,992
(7)	Chitradurga	...	34,647	8,648	43,295
(8)	Dharwad	...	73,078	11,917	84,995
(9)	Dakshina Kannada	...	43,869	20,916	64,785
(10)	Gulbarga	...	40,348	4,423	44,771
(11)	Hassan	...	27,403	4,082	31,485
(12)	Kolar	...	39,312	6,692	40,604
(13)	Kodagu	...	8,804	4,950	13,754
(14)	Mandya	...	25,781	5,377	31·158
(15)	Mysore	...	58,390	14,134	72 524
(16)	Raichur	...	30,278	3,514	33,792
(17)	Shimoga	...	40,455	10,541	50,996
(18)	Tumkur	...	50,015	12,439	62,454
(19)	Uttara Kannada	...	30 331	10,617	40,948
	GRAND TOTAL	...	10·22,280	234,439	12,56,719

ಶ್ರೀ ಪಿ ಬಸವರಾಜ್.—ರಾಜ್ಯದ ಉದ್ಯೋಗ ವಿನಿಮಯ ಕೇಂದ್ರದಲ್ಲಿ ನೋಂದಾಯಿಸಿರುವ ನಿರುದ್ಯೋಗಿಗಳ ಸಂಖ್ಯೆ ೧೨,೫೬,೭೧೯ ಎಂದು ಉತ್ತರ ಕೊಟ್ಟಿದ್ದಾರೆ . ಆದರೆ ನಿಜವಾದ ನಿರುದ್ಯೋಗಿಗಳ ಸಂಖ್ಯೆ ಇದಕ್ಕಿಂತ ಅಧಿಕವಾಗಿದೆ ರಾಜ್ಯದಲ್ಲಿ ಸುಮಾರು ೧೫–೨೦ ಲಕ್ಷ ನಿರುದ್ಯೋಗಿಗಳಾದರೂ ಇರಬಹುದು. ರಾಜ್ಯದಲ್ಲಿ ಕಳೆದ ಹತ್ತು ವರ್ಷಗಳಿಂದ ವಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಿಲ್ಲ. ನಿರುದ್ಯೋಗಿ ಯುವಕರ ಬೃಹತ್ ಸಂಖ್ಯೆ ಹೆಚ್ಚುತ್ತಿರುವ ಇಂತ ಸಂದರ್ಭದಲ್ಲಿ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ; ಇದು ಬಹಳ ಗಂಭೀರವಾದಂಥ ಸಮಸ್ಯೆಯಾಗುತ್ತಿದೆ. ಆದ್ದರಿಂದ ಸರ್ಕಾರದವರು ನಿರುದ್ಯೋಗಿಗಳ ಈ ಒಂದು ಸಮಸ್ಯೆಯನ್ನು ಬಗೆಹರಿಸಲು ಒಂದು ಅಶಾಕಿರಣ ಯೋಜನೆಯನ್ನು ಹಾಕಿಕೊಳ್ಳಬೇಕೆಂದು ಸಭಾಧ್ಯಕ್ಷರ ಮೂಲಕ ಸರ್ಕಾರವನ್ನು ಒತ್ತಾಯಮಾಡುತ್ತೇನೆ. ಮತ್ತು ಅಲ್ಲಿಯತನಕ ನಿರುದ್ಯೋಗಿಗಳಿಗೆ ನಿರುದ್ಯೋಗಿ ಭತ್ಯವನ್ನು ನೀಡುವ ಕಾರ್ಯಕ್ರಮವನ್ನು ಏನಾದರೂ ಸರ್ಕಾರ ಹಾಕಿಕೊಂಡಿದೆಯೇ ಎಂಬುದನ್ನು ಕೇಳಬಯಸುತ್ತೇನೆ.

ಶ್ರೀ ಸಿ. ಎಸ್. ನಾಡಗೌಡ (ಕಾರ್ಮಿಕ ಸಚಿವರು).— ಈ ನಿರುದ್ಯೋಗ ಸಮಸ್ಯೆ ಕೇವಲ ನಮ್ಮ ರಾಜ್ಯದ ಸಮಸ್ಯೆಯಲ್ಲ. ಇದು ನಮ್ಮ ರಾಷ್ಟ್ರದ ಮತ್ತು ಪ್ರಪಂಚದ ಸಮಸ್ಯೆ ಹಾಗೂ ದಿನನಿತ್ಯ ನಾವು ಎದುರಿಸುತ್ತಿರುವ ಸಮಸ್ಯೆ ಆಗಿದೆ. ಈಗ ನಾವು ಕೊಟ್ಟ ಅಂಕಿ ಸಂಖ್ಯೆಗಳ ಪ್ರಕಾರ ನಮ್ಮ ರಾಜ್ಯದಲ್ಲಿ ಹನ್ನೆರಡುಲಕ್ಷದ ಐವತ್ತಾರು ಸಾವಿರ ಚಿಲ್ಲರೆ ನಿರುದ್ಯೋಗಿಗಳು ಇದ್ದಾರೆ. ಮತ್ತು ಉದ್ಯೋಗವಿನಿಮಯ ಕೇಂದ್ರದಲ್ಲಿ ರಿಜಿಸ್ಟರ್ ಮಾಡದೇ ಇರುವ ನಿರುದ್ಯೋಗಿಗಳೂ ಇದ್ದಾರೆ ಎಂದು ಹೇಳುತ್ತೇನೆ. ಈ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಯಾವ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ನಾವು ವಿಚಾರ ಮಾಡಬೇಕಾಗಿದೆ. ಸ್ವಯಂ ಉದ್ಯೋಗದ ಬಗ್ಗೆ ನಮ್ಮ ಶಿಕ್ಷಣ ಸಂಸ್ಥೆಗಳನ್ನು ಮುಖಾಮುಖಿ ಮಾಡಿಸಿ ಮಾಡಿಸಿ ಸಲುವಾಗಿ ಅಂದರೆ, ಐ. ಟಿ. ಐ. ತರಹ ಶಿಕ್ಷಣ ಕೊಡಬೇಕೆಂಬುದು ಸರ್ಕಾರದ ಗಮನದಲ್ಲಿದೆ. ಈ ನಿರುದ್ಯೋಗಿಗಳ ಸಂಖ್ಯೆ ಹೆಚ್ಚುತ್ತಿರುವ ಕಾರಣ. ಇವತ್ತು ಎಸ್. ಎಸ್. ಎಲ್. ಸಿ. ಮತ್ತು ಪಿ. ಯು. ಸಿ. ಮುಗಿಸಿಕೊಂಡ ಬಾಲಕರು ಹೊಲ ಮನೆ ಇದ್ದರೂ ಕೂಡ ನೌಕರಿಗೋಸ್ಕರ ಬೆನ್ನು ಹತ್ತುವ ಪರಿಸ್ಥಿತಿ ಇದೆ ಇದು ನಾವು ಸಾಮಾಜಿಕವಾಗಿ ಎದುರಿಸುತ್ತಿರುವ ಸಮಸ್ಯೆ ಆಗಿದೆ. ಈ ನಿರುದ್ಯೋಗಿಗಳಿಗೆ ಭತ್ಯೆಯನ್ನು ಕೊಡಬೇಕೆಂದು ಕೇಳಿದ್ದಾರೆ. ಸರ್ಕಾರ ಭತ್ಯೆಯನ್ನು ಕೊಡುವಂಥ ಫೋಷಣೆಯನ್ನು ಮಾಡುವುದಕ್ಕಾಗುವುದಿಲ್ಲ. ಕಾರಣ ಈ ೧೨ ಲಕ್ಷ ನಿರುದ್ಯೋಗಿ ಜನರಿಗೆ ತಿಂಗಳಿಗೆ ರೂ.೧೦೦ ಅಥವಾ ರೂ. ೫೦ ಭತ್ಯೆಯನ್ನಾಗಿ ಕೊಟ್ಟರೆ, ಅವರ ಹೊಟ್ಟೆ ತುಂಬುವುದಿಲ್ಲ ಬದಲಾಗಿ ಅವರ ಚಟಕ್ಕೆ ಸಹಾಯವಾಗುತ್ತದೆ. ಆದ್ದರಿಂದ, ಈ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಲು ಆಗುವುದಿಲ್ಲ.

ಶ್ರೀ ಪಿ.ಬಸವರಾಜ್.—ಈಗ ನಾವು ಇದರ ಬಗ್ಗೆ ಒಂದು ಕಾರ್ಯಕ್ರಮ ಹಾಕದೇ ಇದ್ದರೆ ಮುಂದೆ ಬಹಳ ಕಷ್ಟವಾಗುತ್ತದೆ. ಇದನ್ನು ಸರ್ಕಾರ ಬಹಳ ಗಂಭೀರ ಪರಿಸ್ಥಿತಿ ಎಂದು ಪರಿಗಣಿಸಬೇಕು. ಈಗ ಅಶಾಂತಿ ಹರಡುತ್ತಿರುವುದಕ್ಕೆ ಮೂಲಕಾರಣ ಅಂದರೆ ಉದ್ಯೋಗಭದ್ರತೆ ಇಲ್ಲದೇ ಇರುವ ಕಾರಣ ಅಂದರೆ ತಪ್ಪಾಗಲಾರದು. ಯುವಕರಿಗೆ ಏನಾದರೂ ಒಂದು ಉದ್ಯೋಗ ಕೊಡುವಂಥ ಕಾರ್ಯಕ್ರಮವನ್ನು ಹಾಕಿದರೆ ಈ ಒಂದು ಅಶಾಂತ ಪರಿಸ್ಥಿತಿಯನ್ನು ಹೋಗಲಾಡಿಸಲಿಕ್ಕೆ ಅನುಕೂಲವಾಗುತ್ತದೆ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಬಡವರ್ಗದವರಿಗೆ ಕಾಶಲಕರ್ಮಿಗಳಿಗೆ ಹಲವಾರು ಯೋಜನೆಗಳನ್ನು ರೂಪಿಸುವ ಮುಂಚೆನ ಅವರ ಮನಸನ್ನು ಒಲಿಸಿಕೊಂಡಿದ್ದಾರೆ. ಅದೇ ರೀತಿ ಈ ಯುವಕರಿಗೂ ಉದ್ಯೋಗ ಸಿಕ್ಕುವಂಥ ಕಾರ್ಯಕ್ರಮವನ್ನು ಹಾಕಿ ಅವರ ಮನಸ್ಸನ್ನು ಒಲಿಸಿಕೊಳ್ಳುವಂಥ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್,—ಅಧ್ಯಕ್ಷರೇ, ಹಾಗೆಯೇ, ಸರ್ಕಾರದಲ್ಲಿ ಎಷ್ಟು ಉದ್ಯೋಗಗಳು ಖಾಲಿ ಇವೆ ಎಂದು ತಿಳಿಸಬೇಕು.

ಶ್ರೀ ಸಿ. ಎಸ್. ನಾಡಗೌಡ,—ಅಧ್ಯಕ್ಷರೆ, ನಮ್ಮ ವಾಟಾಳ್ ನಾಗರಾಜ್ ಅವರು ಕೇಳಿರುವ ಈ ಪ್ರಶ್ನೆಗೆ ಉತ್ತರ ಕೊಡಲು ಸಮಯ ಬೇಕಾಗುತ್ತದೆ. ಆದ್ದರಿಂದ, ಅದರ ಬಗ್ಗೆ ಅವರು ಬೇರೆ ಪ್ರಶ್ನೆ ಕೇಳಿದರೆ ಉತ್ತರ ಕೊಡುತ್ತೇನೆ

ಅಧ್ಯಕ್ಷರು.—ಮಾನ್ಯ ಸದಸ್ಯರಾದ ಪಿ. ಸಿ. ಸಿದ್ದನಗೌಡರ್‌ರವರ ಪ್ರಶ್ನೆ ೯೦ (೨೮೫)ನ್ನು ಮಂಡಿಸಲಾಗಿದೆ.